# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 581.
2. ಸದಸ್ಯರ ಹೆಸರು : ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು).
3. ಉತ್ತರಿಸಬೇಕಾದ ದಿನಾಂಕ : 20.02.2024.
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ದೇಶೀಯ ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳೆಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು).</td><td>ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಮಾನನಿಲ್ದಾಣಗಳ ವಿವರಗಳು ಈ ಕೆಳಕಂಡಂತಿದೆ;<br>ದೇಶೀಯ (Domestic) ವಿಮಾನನಿಲ್ದಾಣಗಳು:<br>1. ಮೈಸೂರು.<br>2. ಹುಬ್ಬಳ್ಳಿ.<br>3. ಬೆಳಗಾವಿ.<br>4. ಕಲಬುರಗಿ.<br>5. ಶಿವಮೊಗ್ಗ.<br>6. ಬೀದರ್ (ರಕ್ಷಣಾ) ವಿಮಾನನಿಲ್ದಾಣ (ಸಿವಿಲ್ ಎನ್‌ಕ್ಲೇವ್).<br>7. ವಿದ್ಯಾನಗರ (ಖಾಸಗಿ ವಿಮಾನನಿಲ್ದಾಣ).<br><br>ಅಂತರಾಷ್ಟ್ರೀಯ (International) ವಿಮಾನ ನಿಲ್ದಾಣಗಳು:<br>1. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು.<br>2. ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಮಂಗಳೂರು.</td></tr>
<tr><td>(ಆ)</td><td>ರಾಜ್ಯದಲ್ಲಿ ಎಲ್ಲೆಲ್ಲಿ ವಿಮಾನ ನಿಲ್ದಾಣ ಕಾಮಗಾರಿಗಳು ಪ್ರಗತಿಯಲ್ಲಿವೆ; ಈ ಕಾಮಗಾರಿಗಳು ಯಾವ ಕಾಲಮಿತಿಯೊಳಗೆ ಪೂರ್ಣಗೊಳ್ಳುತ್ತವೆ;</td><td>ರಾಜ್ಯದಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿರುವ ವಿಮಾನನಿಲ್ದಾಣಗಳ ವಿವರಗಳು ಈ ಕೆಳಕಂಡಂತಿದೆ:<br><table><tr><th>ವಿಮಾನನಿಲ್ದಾಣ</th><th>ಪೂರ್ಣಗೊಳಿಸುವ ವರ್ಷ</th></tr><tr><td>ವಿಜಯಪುರ</td><td>ಫೆಬ್ರುವರಿ-2024</td></tr><tr><td>ಹಾಸನ</td><td>2025</td></tr><tr><td>ರಾಯಚೂರು</td><td>2026</td></tr></table></td></tr>
<tr><td>(ಇ)</td><td>ವಿಮಾನ ನಿಲ್ದಾಣ ಕಾರ್ಯಾರಂಭಕ್ಕೆ ಅನುಮತಿ ಪಡೆಯಲು ಇರುವ ಮಾನದಂಡಗಳೇನು (ಸಂಪೂರ್ಣ ಮಾಹಿತಿ ಒದಗಿಸುವುದು).</td><td>ವಿಮಾನನಿಲ್ದಾಣ ಕಾರ್ಯಾರಂಭಕ್ಕೆ ಕೇಂದ್ರ ಸರ್ಕಾರದ Ministry of Civil Aviation (MOCA)ನ ಅಂಗ ಸಂಸ್ಥೆಗಳಾದ Directorate General of Civil Aviation (DGCA) Bureau of Civil Aviation Security (BCAS) ಮತ್ತು Airport Authority of India (AAI) ಗಳಿಂದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ.</td></tr>
</table>

ಪುಟ-2ಕ್ಕೆ

| | | |
|---|---|---|
| (ಈ) | ಬೆಂಗಳೂರು ನಗರ ಹೆಚ್.ಎ.ಎಲ್ ವಿಮಾನ ನಿಲ್ದಾಣದ ಸದ್ಯದ ಸ್ಥಿತಿಗತಿಗಳೇನು; ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಹೆಚ್.ಎ.ಎಲ್. ವಿಮಾನ ನಿಲ್ದಾಣವನ್ನು ದೇಶೀಯ ವಿಮಾನಗಳ ಸಂಚಾರಕ್ಕೆ ಬಳಸಿಕೊಳ್ಳುವ ಬಗ್ಗೆ ಸರ್ಕಾರದ ನಿರ್ಧಾರವೇನು? | ಬೆಂಗಳೂರು ನಗರದ ಹೆಚ್.ಎ.ಎಲ್ ವಿಮಾನನಿಲ್ದಾಣದ ರನ್‌ವೇ ಹೆಚ್.ಎ.ಎಲ್. ಒಡೆತನದಲ್ಲಿದೆ. ಟರ್ಮಿನಲ್ ಕಟ್ಟಡ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಒಡೆತನದಲ್ಲಿದ್ದು, ಬೆಂಗಳೂರು ಅಂತರಾಷ್ಟ್ರೀಯ ವಿಮಾನನಿಲ್ದಾಣ ಲಿಮಿಟೆಡ್ (BIAL) ಸಂಸ್ಥೆಯು ಕಾರ್ಯಾಚರಣೆಯ ಹಕ್ಕನ್ನು ಹೊಂದಿರುತ್ತದೆ.<br><br>ಹೆಚ್.ಎ.ಎಲ್ ವಿಮಾನನಿಲ್ದಾಣವನ್ನು ದೇಶೀಯ ವಿಮಾನಗಳ ಸಂಚಾರಕ್ಕೆ ಬಳಸಿಕೊಳ್ಳುವ ಬಗ್ಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ, ಹೆಚ್.ಎ.ಎಲ್ ಮತ್ತು ಬೆಂಗಳೂರು ಅಂತರಾಷ್ಟ್ರೀಯ ವಿಮಾನನಿಲ್ದಾಣ ಲಿಮಿಟೆಡ್ (BIAL) ಸಂಸ್ಥೆಗಳೊಂದಿಗೆ ಸಮಾಲೋಚಿಸಲಾಗುತ್ತಿದೆ. |

ಸಂಖ್ಯೆ:ಮೂಅಇ 21 ರಾಅವಿ 2024

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು